

## ಇದು ಡೋಲು

ಡೋಲು ಬೃಹದಾಕೃತಿಯ ಚರ್ಮವಾದ್ಯ. ಕರಾವಳಿ ಸೇರಿದಂತೆ ಬೇರೆ ಬೇರೆ ದೇವಾಲಯಗಳಲ್ಲಿ ಮಹಾಮಂಗಳಾರತಿ ಸಂದರ್ಭ ಡೋಲು ಬಾರಿಸುವುದು ವಾಡಿಕೆ. ಡೋಲು ಬಾರಿಸಿದಾಗ ಮೊಳಗುವ ಶಬ್ದ ಧ್ವನಿ ಕೇಳಲು ತುಂಬ ಚೆಂದವಾಗಿರುತ್ತದೆ. ಆ ಶಬ್ದವೂ ಬಹುದೂರದ ತನಕವೂ ಕೇಳುತ್ತದೆ.

ಈ ಚಿತ್ರದಲ್ಲಿ ಕಾಣುತ್ತಿರುವ ಬೃಹದಾಕಾರವಾಗಿರುವ ಡೋಲು ಉಡುಪಿಯ ನೀಲಾವರದ ಮಹಿಷ ಮರ್ಧಿನಿ ದೇವಾಲಯದ್ದು. ಹಳೆಯ ಕಾಲದ ಈ ಡೋಲನ್ನು ದೇಗುಲದ ಆಡಳಿತ ಮಂಡಳಿ ಬಹು ಜತನದಿಂದ ಕಾಪಿಟ್ಟುಕೊಂಡು ಬಂದಿದೆ. ಇದರ ಮತ್ತೊಂದು ವಿಶೇಷವೆಂದರೆ ಒಂದು ಸಲ ಡೋಲು ಬಾರಿಸಿದಾಗ ಹೊಮ್ಮುವ ಶಬ್ದದ ಜೊತೆಗೆ ಅದರ ಪ್ರತಿಧ್ವನಿಯೂ ತುಂಬ ಚೆಂದವಾಗಿ ಕಿವಿಗಪ್ಪಳಿಸುತ್ತದೆ. ಪ್ರತಿಧ್ವನಿಯ ನಿಂತ ಬಳಿಕವಷ್ಟೇ ಮತ್ತೊಂದು ಏಟು ಹೊಡೆಯುತ್ತಾರೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ



## ಎಂತಾ...ಶೃಂಗಾರ ನೋಡು...!

ಗೋವಿನ ಮುಖದಲ್ಲಿ ಬ್ರಹ್ಮನನ್ನು, ಕಣ್ಣುಗಳಲ್ಲಿ ವಿಷ್ಣುವನ್ನು, ಕಂಠದಲ್ಲಿ ರುದ್ರನನ್ನು, ಕೊಂಬುಗಳಲ್ಲಿ ಸೂರ್ಯ ಚಂದ್ರರನ್ನು, ನಾಲ್ಕು ಕಾಲುಗಳಲ್ಲಿ ನಾಲ್ಕು ವೇದವನ್ನು, ಎಂಟು ಗೊರಸುಗಳಲ್ಲಿ ಅಷ್ಟದಿಕ್ಪಾಲಕರನ್ನು, ಬಾಲದಲ್ಲಿ ಸರ್ಪ ಸಂತತಿಯನ್ನು, ರೋಮದಲ್ಲಿ ಕೋಟಿ ದೇವತೆಗಳನ್ನು, ಕೆಚ್ಚಲಲ್ಲಿ ಅಮೃತವನ್ನು ಕಾಣುವ ದೇಶ ನಮ್ಮದು. ಅಂತೆಯೇ ದನದ ಹುಣ್ಣಿಮೆಯನ್ನೊಳಗೊಂಡು ವರುಷದ ಅನೇಕ ಸಂದರ್ಭಗಳಲ್ಲಿ ದನಕರುಗಳನ್ನು ಶೃಂಗರಿಸಿ ಪೂಜಿಸುವುದನ್ನು ನಾವು ನೋಡುತ್ತೇವೆ.

ಇಲ್ಲೊಬ್ಬ ಗೋಪ್ರೇಮಿ ಜೋಡಿ ದನಗಳ ಬಾಲವನ್ನು ಶೃಂಗಾರ ಮಾಡಿದ್ದನ್ನು ನೋಡಿದರೆ, ಯಾವ ಮದುವಣಗಿತ್ತಿಯ ಕೇಶ ಶೃಂಗಾರಕ್ಕಿಂತ ಈ ಶೃಂಗಾರ ಕಡಿಮೆ ಇಲ್ಲವೆಂದೆನಿಸುತ್ತದೆ! ಅಂಕೋಲಾ ತಾಲ್ಲೂಕಿನ ಮೊಗಟಾದ ಗೋಪ್ರೇಮಿ ಹಾಗೂ ದನಗಳ ವ್ಯಾಪಾರಿ ನಾರಾಯಣ ನಾಯಕರು ದನಗಳ ಶೃಂಗಾರದ ಬಗ್ಗೆ ಮಾತಾಡುತ್ತಾ ಕಲಘಟಗಿ ದನಗಳ ಸಂತೆಯಲ್ಲಿ ಇಂತಹ ದನಗಳ ಶೃಂಗಾರ ನೋಡಬಹುದು ಎನ್ನುತ್ತಾರೆ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ



## ಸಂಚಾರಿ ಬಾವಿ!

ಮಗಳು ನಿಖಿತಾಳ ವಿವಾಹವು ವರ ಶಶಾಂಕ್ ಅವರೊಂದಿಗೆ ಶ್ರೀ ವಿದ್ಯಾಧಿರಾಜ ಭವನದಲ್ಲಿ ನಡೆಯಿತು. ಮದುವೆ ದಿನದ ಮುಂಜಾನೆ ಮಂಟಪ ಶಾಸ್ತ್ರಗಳು ಶುರುವಾದವು. ಐವರು ಸುಮಂಗಲಿಯರು ಕಳಶದ ಮೂಲಕ ಬಾವಿಯಿಂದ ಗಂಗೆಯನ್ನು (ನೀರು) ತರಲು ಹೇಳಿದರು. ಛತ್ರ ಸೇರಿದಂತೆ ಸುತ್ತಮುತ್ತಲು ಬಾವಿ ಇರಬಹುದೆಂದು ಹೊರಟವರು ಬಂದದ್ದು ಬರೀ ಕೈಲಿ.

ಬಾವಿ ಸಿಗದೇ ಸುಮಂಗಲಿಯರ ಮುಖ ಬೇಸರದಿಂದ ಬಾಡಿದ್ದವು. ಅದನ್ನು ಕಂಡ ಪುರೋಹಿತರು ತಕ್ಷಣ ಮದುವೆ ಮಂಟಪದ ಸ್ಟೇಜ್ ಕೆಳಗೆ ಇಟ್ಟಿದ್ದ ಹೊದಿಕೆ ಮುಚ್ಚಿದ ಬಾವಿಯನ್ನು ತೋರಿಸಿದರು. ಅದು ಬಾವಿಯೊಂದರ ಪ್ರತಿಕೃತಿಯಾಗಿತ್ತು. ಸಿಂಗಾರಗೊಂಡಿದ್ದ ಪುಟ್ಟ ಸಂಚಾರಿ ಬಾವಿ ಕಂಡು ನೆರದಿದ್ದವರು ಬೆರಗಾದರು! ಮದುವೆಗೆ ಬಂದವರು ಬಾವಿ, ರಾಟೆ, ಹಗ್ಗ, ಬಾವಿ ಒಳಗಿದ್ದ ನೀರು ತುಂಬಿದ ಸ್ಟೀಲ್ ಪಾತ್ರೆ ಕಂಡು ಪುಳಕಿತರಾದರು! ಸುಮಂಗಲಿಯರು ಸ್ವಲ್ಪ ಕಷ್ಟವಾದರೂ ಸಾಂಕೇತಿಕವಾಗಿ ಬಾವಿಯಿಂದ ಕಳಶದಲ್ಲಿ ನೀರು ತುಂಬಿ ತಂದರು!

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

### ನೀವೂ ಬರೆಯಿರಿ

'ಸುಧಾ' ವಾರ ಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly